## ಬದುಕೋದು ಹೇಗೆ?

ಹಣ ತೆಗೆದುಕೊಳ್ಳಲು ಎಟಿಎಂಗೆ ಹೋಗಿದ್ದೆ. ಜೊತೆಗೆ ಗೆಳೆಯನೂ ಇದ್ದ. ಮೊದಲೇ ಇಬ್ಬರು ಸಾಲಿನಲ್ಲಿದ್ದರು. ಬಾಗಿಲಲ್ಲಿ ಕುಳಿತಿದ್ದ ಸೆಕ್ಯೂರಿಟಿ ಗಾರ್ಡ್ ಜೊತೆಗೆ ಮಾತಿಗಿಳಿದ ಗೆಳೆಯ, 'ಹಣ ಇದೆಯಾ ಹೇಗೆ?' ಎಂದ. ಸೆಕ್ಯೂರಿಟಿ ಗಾರ್ಡ್, 'ಈಗಿದೆ; ಇನ್ಮೇಲೆ ಹಣ ಸಿಗೋದು ಕಷ್ಟ ಸೋಮಿ! ಇನ್ಮುಂದೆ ಪರ್ಸ್‌ಲ್ಲಿ ದುಡ್ಡೇ ಮಡ್ಗಂಗಿಲ್ಲ... ಬರೀ ಕಾರ್ಡ್...' ಎಂದ. ಸುಮ್ಮನಿರಲಾರದ ಗೆಳೆಯ, 'ಛೇ! ಬಹಳ ಅನ್ಯಾಯ ಕಣ್ರಿ!...' ಎಂದ. 'ಯಾಕ್ ಸೋಮಿ ಅನ್ಯಾಯ? ಯಾರಿಗನ್ಯಾಯಾ?' ಎಂಬ ಪ್ರಶ್ನೆಗೆ ಗೆಳೆಯ, 'ಅಲ್ರೀ, ಪರ್ಸ್‌ಲ್ಲಿ ದುಡ್ಡೇ ಇಡದಿದ್ರೆ ಪಿಕ್ ಪಾಕೇಟ್ ಮಾಡೋವ್ರು ಪಾಪ ಬದುಕೋದಾದ್ರು ಹೆಂಗ್ರೀ? ಬಹಳ ಕಷ್ಟ...' ಎಂದ. ಸೆಕ್ಯೂರಿಟಿಯವ ಸುಸ್ತು. ಉಳಿದವರ ಮುಖದಲ್ಲಿ ಮಸ್ತ್ ಮಂದಹಾಸ.

**ಹೊಸ್ಮನೆ ಮುತ್ತು**






## ಶುಗರ್ ಬರುತ್ತೆ

ಮೊನ್ನೆ ನನ್ನ ಚಿಕ್ಕಮ್ಮ ಫೋನ್ ಮಾಡಿದ್ಲು. ಅವಳ ಜೊತೆ ಮಾತಾಡ್ತಾ ಇದ್ದಾಗ ಹೊರಗಡೆ ಗುಬ್ಬಚ್ಚಿಗಳ ಕಲರವ ಶುರುವಾಯ್ತು. ನಾನು ಅವುಗಳಿಗೆ ಅಕ್ಕಿ ಹಾಕೋಕೆ ಮೊಬೈಲ್ ಹಿಡಿದೇ ಹೋದೆ. ಹೇಳಿದೆ, 'ನೋಡು ಚಿಕ್ಕಮ್ಮಾ, ಗುಬ್ಬಚ್ಚಿಗಳೇ ಇಲ್ಲ ಅಂತರಲ್ಲಾ... ನಾನು ದಿನಾ ಅಕ್ಕಿ ಹಾಕ್ತೀನಿ, ನೀರೂ ಇಟ್ಟಿರ್ತೀನಿ ಎಷ್ಟೊಂದು ಗುಬ್ಬಚ್ಚಿಗಳು ಚಿಲಿ ಪಿಲಿ ಅಂತ ಬರುತ್ವೆ... ತುಂಬಾ ಖುಷಿಯಾಗತ್ತಪ್ಪ...' ಅಂದೆ. ಅದಕ್ಕವಳು, 'ಗುಬ್ಬಚ್ಚಿ ಬ್ರಾಹ್ಮಣ, ಬರಿ ಅಕ್ಕಿ ಹಾಕಿದ್ರೆ ಅನ್ನ ಇಟ್ಟಂಗಾಗುತ್ತೆ, ಜೊತೆಗೆ ಸ್ವಲ್ಪ ಬೆಲ್ಲದ ಪುಡಿ ಸೇರಿಸಿ ಹಾಕು; ಪಾಯಸ ಹಾಕಿದಂತಾಗುತ್ತೆ' ಅಂದ್ಲು. ಅಲ್ಲೇ ಆಡುತ್ತಿದ್ದ ತಂಗಿ ಮಗ ಪ್ರಜ್ವಲ್ ಚಿಕ್ಕಮ್ಮನಿಂದ ಫೋನು ಕಸಿದುಕೊಂಡು ಹೇಳಿದ, 'ದೊಡ್ಡಮ್ಮಾ, ಹಾಗೆ ಮಾಡ್ಬೇಡಿ. ದಿನಾ ಸ್ವೀಟ್ ತಿಂದ್ರೆ, ಪಾಪ ಅವಕ್ಕೂ ಶುಗರ್ ಬರುತ್ತೆ' ಅಂತ!

**'ಸುಮಾ ಕಳಸಾಪುರ'**